**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ.490/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಚಂದ್ರ | ಪ್ರಾಸಾ-12 |
| ತಂದೆಯ ಹೆಸರು | : ಲೇಟ್ ಶಿವಪ್ಪ ಗೌಡ | ಚಾಸಾ-7 |
| ವಯಸ್ಸು | : 65 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೂಲಿ | ದಿನಾಂಕಃ 29.12.2025 |
| ವಾಸಸ್ಥಳ | : ಕೊಂಡದ ಮನೆ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿದೆ. ಚಾಸಾ-1 ಮತ್ತು 2 ರವರ ಪರಿಚಯ ನನಗಿದೆ.

ಕಳೆದ 4 ವರ್ಷದ ಹಿಂದೆ ಚಾಸಾ-2 ಮತ್ತು ಆರೋಪಿಯ ನಡುವೆ ನೀರಿನ ವಿಚಾರವಾಗಿ ಗಲಾಟೆಯಾಗುತ್ತಿತ್ತು. ಆಗ ಸ.6.00 ರ ಸಮಯವಾಗಿತ್ತು. ಚಾಸಾ-2 ಮತ್ತು ಆರೋಪಿಯ ನಡುವೆ ಏನು ವಾದ ವಿವಾದವಾಗಿದೆ ಎಂದು ನನಗೆ ತಿಳಿದಿರುವುದಿಲ್ಲ. ಆ ಸಮಯದಲ್ಲಿ ನನ್ನನ್ನು ಹೊರತುಪಡಿಸಿ ಇತರೆ ಯಾವುದೇ ವ್ಯಕ್ತಿಗಳು ಸ್ಥಳದಲ್ಲಿ ಹಾಜರಿರುವುದಿಲ್ಲ. ಆ ದಿನ ಚಾಸಾ-2 ರವರು ಯಾವ ಬಣ್ಣದ ವಸ್ತ್ರವನ್ನು ಧರಿಸಿದ್ದರು ಎಂದು ನನಗೆ ನೆನಪಾಗುತ್ತಿಲ್ಲ. ಗಲಾಟೆಯ ನಂತರ ಏನಾಗಿದೆ ಎಂದು ನಾನು ಕೇಳಿ ತಿಳಿದುಕೊಂಡಿರುವುದಿಲ್ಲ. ಸಾಕ್ಷಿಗೆ ನ್ಯಾಯಾಲಯಲದ ಮುಂದಿರುವ ಎಂ.ಒ.1 ರಿಂದ 4 ನ್ನು ಎಂದು ಗುರುತಿಸಲಾಗಿರುವ ವಸ್ತುಗಳನ್ನು ತೋರಿಸಲಾಗಿ ಸಾಕ್ಷಿಯು ಆ ವಸ್ತುಗಳನ್ನು ಈ ಹಿಂದೆ ನೋಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆಗಳನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನಾನು ಚಾಸಾ-8 ರವರು ಕೂಲಿ ಲೈನ್ ನಲ್ಲಿ ವಾಸಿಸುತ್ತಿದ್ದೇನೆ ಎಂದರೆ ಸರಿ. ದಿ.27.11.2022 ರಂದು ಸ.5.00 ರ ಸಮಯದಲ್ಲಿ ನಾನು ವಾಸವಿರುವ ಕೂಲಿ ಲೈನ್ ನ ಬಳಿ ಗಲಾಟೆಯ ಶಬ್ದ ಕೇಳಿ ಬರುತ್ತಿತು ಎಂದರೆ ಸರಿ. ಅದನ್ನು ಕೇಳಿ ನಾನು ಹೋಗಿ ನೋಡಲಾಗಿ ಚಾಸಾ-2 ಮತ್ತು ಆರೋಪಿಯ ನಡುವೆ ನೀರಿನ ವಿಚಾರವಾಗಿ ಗಲಾಟೆಯಾಗುತ್ತಿತ್ತು ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಆರೋಪಿಯು ಚಾಸಾ-2 ರವರಿಗೆ ಕಬ್ಬಿಣದ ಕತ್ತಿಯಲ್ಲಿ ಚಾಸಾ-2 ರವರಿಗೆ ಹೊಡೆಯುತ್ತಿದ್ದುದ್ದನ್ನು ನಾನು ನೋಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಕೃತ್ಯವನ್ನು ನಾನು ಮತ್ತು ಚಾಸಾ-1 ರವರು ಪ್ರತ್ಯಕ್ಷವಾಗಿ ನೋಡಿರುತ್ತೇನೆ ಎಂದರೆ ಸರಿಯಲ್ಲ. ನಾನು

ನೋಡಿದಾಗ ಚಾಸಾ-2 ರವರ ಮೂಗು ಹರಿದು ರಕ್ತ ಬರುತ್ತಿತು ಮತ್ತು ಅವರ ತಲೆಯ ಮೇಲೂ ಸಹಾ ಗಾಯವಾಗಿತ್ತು ಎಂದರೆ ಸರಿಯಲ್ಲ. ನಂತರ ಆರೋಪಿಯು ತನ್ನ ಕೈಯಲ್ಲಿದ್ದ ಕಬ್ಬಿಣದ ಕತ್ತಿಯನ್ನು ಪಕ್ಕದಲ್ಲಿದ್ದ ತೆಂಗಿನ ಮರದ ಬುಡಕ್ಕೆ ಎಸೆದು ಅಲ್ಲಿಂದ ಹೊರಟು ಹೋದರು ಎಂದರೆ ಸರಿಯಲ್ಲ. ನಂತರ ನಾನು ಈ ಎಲ್ಲಾ ವಿಚಾರವನ್ನು ಚಾಸಾ-8 ರವರಿಗೆ ತಿಳಿಸಲಾಗಿ ಅವರು ಚಾಸಾ-2 ಮತ್ತು ಅವರ ಪತ್ನಿಯನ್ನು ಖಾಸಗಿ ವಾಹನದಲ್ಲಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ನಂತರ ಚಾಸಾ-2 ರವರು ಚಿಕ್ಕಮಗಳೂರಿನಲ್ಲಿ ಹೆಚ್ಚಿನ ಚಿಕಿತ್ಸೆ ಪಡೆದ ಬಗ್ಗೆ ನನಗೆ ಮಾಹಿತಿ ಇರುತ್ತದೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಎಂ.ಒ.3 ರಿಂದ ಆರೋಪಿಯು ಚಾಸಾ-2 ರವರ ಮೇಲೆ ಹಲ್ಲೆ ಮಾಡಿದ ವಿಷಯ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ದಿ.28.11.2022 ರ ತನ್ನ ಹೇಳಿಕೆಯ ಭಾಗವನ್ನು ಸಂಪೂರ್ಣ ಅಲ್ಲಗಳೆದಿದ್ದು, ಸದರಿ ಹೇಳಿಕೆಯ ಭಾಗವನ್ನು ನಿಪಿ-28 ಎಂದು ಗುರುತಿಸಲಾಯಿತು. ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಸಹಾ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.**
**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.